**1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು, ದ.ಕ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:1577/2025**

**ಆರೋಪಿಯ ಹೆಸರು** : ರಾಕೇಶ್ ನಾಯ್ಕ

**ತಂದೆಯ ಹೆಸರು** : ರಾಮ ನಾಯ್ಕ

**ವಯಸ್ಸು** : 34 ವರ್ಷ

**ಉದ್ಯೋಗ** : ಖಾಸಗಿ ವಲಯದಲ್ಲಿ ನೌಕರ

**ವಾಸ್ತವ್ಯ** : 2-204 ಒಡವು ಮನೆ,
ಕೃಷ್ಣನಗರ ಚಿಕ್ಕಮುಡ್ನೂರು ಗ್ರಾಮ,
ಪುತ್ತೂರು ತಾಲೂಕು,
ದಕ್ಷಿಣ ಕನ್ನಡ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರನ್ವಯ ಆರೋಪಿಯ ವಿಚಾರಣೆ**

ಪ್ರಶ್ನೆ ನಂ.1 ನೀವು ನ್ಯಾಯಾಲಯದ ಮುಂದೆ ವಿಚಾರಣೆಯಾದ ಎಲ್ಲಾ ಸಾಕ್ಷಿದಾರರ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

ಉತ್ತರ :

ಪ್ರಶ್ನೆ ನಂ.2 : ಫ್ರಾಸಾ1 (ಶ್ರೀ ಆದಂ ಸಾಹೇಬ್) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮೃತ ಇಬ್ರಾಹಿಂ ನನ್ನ ತಮ್ಮ. ದಿ.5-4-25 ರಂದು ನಾನು ನನ್ನ ಕೆಲಸದ ಮೇರೆಗೆ ಪುತ್ತೂರಿಗೆ ಬಂದಿದ್ದಾಗ ಚಾಸಾ2 ರವರು ಫೋನ್ ಮಾಡಿ ಮದ್ಲ ಎನ್ನುವ ಸ್ಥಳದಲ್ಲಿ ನನ್ನ ತಮ್ಮ ಸ್ಕೂಟಿ ತಾಗಿ ಬಿದ್ದಿದ್ದರು ಎಂದು ತಿಳಿಸಿದ್ದು ನಾನು ಸ್ಥಳಕ್ಕೆ ಬಸ್ಸಿನಲ್ಲಿ ಹೋಗಿ ನೋಡಿದಾಗ ಸ್ಥಳಕ್ಕೆ ಬಂದಿದ್ದ ನನ್ನ ಮಗ ಚಾಸಾ-4 ಸ್ಥಳದಿಂದ ನನ್ನ ತಮ್ಮನನ್ನು ಆ್ಯಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದನು, ನಂತರ ನಾನು ಮಹಾವೀರ ಆಸ್ಪತ್ರೆಗೆ ನನ್ನ ತಮ್ಮನನ್ನು ನೋಡಲು ಹೋದೇನು. ನಾನು ನೋಡಿದಾಗ ನನ್ನ ತಮ್ಮನ ತಲೆಗೆ, ಎದೆಗೆ, ಕುತ್ತಿಗೆಗೆ ಮತ್ತು ಕೈಗಳಿಗೆ ಗಾಯಗಳಾಗಿತ್ತು. ನನ್ನ ತಮ್ಮ

ಇಬ್ರಾಹಿಂ ಕೆಲಸಕ್ಕೆ ಹೋಗಿ ನಡೆದು ಬರುವಾಗ ಆತನಿಗೆ ಸ್ಕೂಟಿ ತಾಗಿ ಅಪಘಾತವಾಗಿದೆ ಎಂದು ಗೊತ್ತಾಯಿತು. ರಾಕೇಶ್ ಎನ್ನುವವರ ಸ್ಕೂಟಿ ತಾಗಿ ಅಪಘಾತವಾಯಿತು ಎಂದು ಗೊತ್ತಾಯಿತು. ಅಪಘಾತ ರಾಕೇಶ್ ಎನ್ನುವವರ ತಪ್ಪಿನಿಂದ ಆಗಿದೆ ಎಂದು ಗೊತ್ತಾಯಿತು. ನಂತರ ನಾನು ಮರುದಿನ ಪೋ. ಠಾಣೆಗೆ ಹೋಗಿ ಅಪಘಾತ ಸಂಬಂಧಿತವಾಗಿ ದೂರು ಕೊಟ್ಟಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರ

ಪ್ರಶ್ನೆ ನಂ.3 ಫ್ರಾಸಾ-1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿ.**7-4-25** ರಂದು ಅಪಘಾತ ನಡೆದ ಸ್ಥಳಕ್ಕೆ ಪೊಲೀಸರು ಬಂದಿದ್ದು ನಾನು ಅಪಘಾತ ಸ್ಥಳವನ್ನು ತೋರಿಸಿದ್ದೇನೆ. ನಂತರ ಪೋ ಠಾಣೆಗೆ ಬಂದಿದ್ದು ಪೊಲೀಸರು ನನ್ನ ಸಹಿ ಪಡೆದಿದ್ದಾರೆ. ಪೋ ಠಾಣೆಯಲ್ಲಿ ಪೊಲೀಸರು ಸ್ಕೂಟಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ನನ್ನ ತಮ್ಮ ಇಬ್ರಾಹಿಂನನ್ನು ಮಹಾವೀರ ಆಸ್ಪತ್ರೆಯಿಂದ ಪುತ್ತೂರಿನ ಸರ್ಕಾರೀ ಆಸ್ಪತ್ರೆಗೆ ಶಿಫ್ಟ್ ಮಾಡಿದ್ದಾರೆ. ಅವರ ಕುತ್ತಿಗೆ ಭಾಗಕ್ಕೆ ತೀವ್ರತರವಾದ ಗಾಯವಾಗಿತ್ತು, ಅಲ್ಲಿ ವೈದ್ಯರು **2** ದಿನ ಚಿಕಿತ್ಸೆ ಕೊಟ್ಟು ನಂತರ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳುಹಿಸಿದರು. ಅಲ್ಲಿನ ವೈದ್ಯರು ಪರೀಕ್ಷಿಸಿ ನನ್ನ ತಮ್ಮ ಉಳಿಯುವುದಿಲ್ಲ ಮನೆಗೆ ಕರೆದುಕೊಂಡು ಹೋಗಿ ಎಂದು ಹೇಳಿದ್ದು ನಾವು ವಾಪಸ್ಸು ಮನೆಗೆ ನನ್ನ ತಮ್ಮನನ್ನು ಕರೆದುಕೊಂಡು ಬಂದಿದ್ದು ಆತ **2** ದಿನ ಕಳೆದ ನಂತರ ಅಪಘಾತವಾದ **10** ದಿನಗಳ ನಂತರ ಮೃತನಾಗಿರುತ್ತಾನೆ. ನನ್ನ ತಮ್ಮ ಮೃತನಾದ ಬಗ್ಗೆ ಪೋಲೀಸರಿಗೆ ಮಾಹಿತಿ ಕೊಟ್ಟಿದ್ದೇನೆ. ಅಪಘಾತ ಸಂಬಂಧಿತವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.4 ಫ್ರಾಸಾ.6 (ಸುಷ್ಮ ಭಂಡಾರಿ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಾನು ಆಗಸ್ಟ್ 2024 ರಿಂದ ಪ್ರಸ್ತುತವೂ ಸಹ ಪುತ್ತೂರು ಗ್ರಾಮಾಂತರ ಪೋ ಠಾಣೆಯಲ್ಲಿ ಪೋ ಉಪ ನಿರೀಕ್ಷಕಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ.17-04-2025 ರಂದು ಹಗಲು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-20 ರವರು ನನಗೆ ಕರೆಮಾಡಿ ಮಾಡ್ನೂರು ಗ್ರಾಮದಲ್ಲಿ ಇಬ್ರಾಹಿಂ ರವರು ಮರಣ ಹೊಂದಿರುವುದಾಗಿ ಮಾಹಿತಿಯನ್ನು ನೀಡಿದ್ದು ನಾನು ಕೂಡಲೇ ಚಾಸಾ-15 ಹಾಗೂ 21 ರವರನ್ನು ಕರೆದುಕೊಂಡು ತಕ್ಷೀರು ಸ್ಥಳಕ್ಕೆ ಹೋದೆನು. ಅಲ್ಲಿ ಮೃತ ಇಬ್ರಾಹಿಂ ರವರ ಅಣ್ಣ ಚಾಸಾ-1 ರವರು ಆ ದಿನ ಊಟ ಮಾಡಿ ಮಲಗಿದ್ದ ಇಬ್ರಾಹಿಂ ಮೃತರಾಗಿರುವ ಬಗ್ಗೆ ತಿಳಿಸಿದ್ದು ಅವರು ನೀಡಿದ್ದ ಲಿಖಿತ ದೂರನ್ನು ಸ್ವೀಕರಿಸಿದ್ದು ದೂರನ್ನು ಚಾಸಾ-21 ರವರ ಮುಖಾಂತರ ಪ್ರ ವ ವ ಯನ್ನು ದಾಖಲಿಸಲು ಠಾಣೆಗೆ ಕಳುಹಿಸಿರುತ್ತೇನೆ ಎಂದು ಸಾಕ್ಷ್ಯನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.5 ಫ್ರಾಸಾ-6 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನಂತರ ಪಂಚರಾದ ಚಾಸಾ-9 ರಿಂದ 11 ರವರ ಸಮಕ್ಷಮ ಚಾಸಾ-1 ರವರು ತೋರಿಸಿಕೊಟ್ಟ ಮೃತ ಇಬ್ರಾಹಿಂರವರ ಶವತನಿಖಾ ಮಹಜರನ್ನು ಸಂಜೆ 6.00 ರಿಂದ 7.30 ರ ವರೆಗೆ ನಡೆಸಿ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಪುತ್ತೂರು ಸರ್ಕಾರೀ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ದಿ.2-5-25 ರಂದು ಪುತ್ತೂರು ಸರ್ಕಾರೀ ಆಸ್ಪತ್ರೆಯ ವೈದ್ಯಾಧಿಕಾರಿಗಳು ನೀಡಿದ ಮೃತ ಇಬ್ರಾಹಿಂರವರ ದೇಹದ ವಿಸ್ರವನ್ನು ಸ್ವೀಕರಿಸಿ ರಾಸಾಯನಿಕ ವಿಶ್ಲೇಷಣೆಗಾಗಿ ಆರ್ ಎಫ್ ಎಸ್ ಎಲ್ ಮಂಗಳೂರುರವರಿಗೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಮೃತ ಇಬ್ರಾಹಿಂ ರವರ ಪಿ ಎಮ್ ವರದಿಯನ್ನು ವೈದ್ಯಾಧಿಕಾರಿಯವರಿಂದ ಪಡೆದಿರುತ್ತೇನೆ. ದಿ 8-5-2025 ರಂದು ಆರ್ ಎಫ್ ಎಸ್ ಎಲ್ ಮಂಗಳೂರುರವರಿಂದ ಬಂದ ವರದಿಯನ್ನು ಸ್ವೀಕರಿಸಿರುತ್ತೇನೆ ಎಂದು

ಸಾಕ್ಷ್ಯನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.6 ಫ್ರಾಸಾ-6 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿ.**29-5-25** ರಂದು ಮೃತ ವ್ಯಕ್ತಿಯ ಮರಣ ಕಾರಣವನ್ನು ತಿಳಿಯಲು ಪುತ್ತೂರಿನ ಸರ್ಕಾರೀ ಆಸ್ಪತ್ರೆಯ ವೈದ್ಯಾಧಿಕಾರಿಯವರಿಗೆ ಕೋರಿಕೆಯನ್ನು ಸಲ್ಲಿಸಿ ಅವರಿಂದ ವರದಿಯನ್ನು ಪಡೆದಿರುತ್ತೇನೆ. ವೈದ್ಯಾಧಿಕಾರಿಗಳು ನೀಡಿದ ವರದಿಯಲ್ಲಿ ಮೃತ ವ್ಯಕ್ತಿಯು ಅಪಘಾತದಿಂದ ಆದ ಗಾಯಗಳಿಂದಲೇ ಸಾವಿಗೀಡಾಗಿರುವುದು ಕಂಡುಬಂದಿರುತ್ತದೆ. ಆದಕಾರಣ ಯು ಡಿ ಆರ್ ಅಂತಿಮ ವರದಿಯನ್ನು **21.6.25** ರಂದು ತಯಾರಿಸಿ ಮಾನ್ಯ ಉಪವಿಭಾಗಾಧಿಕಾರಿಯವರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿ.**24.6.25** ರಂದು ಇಬ್ರಾಹಿಂ ರವರ ಸಾವು ಅಪಘಾತದಿಂದ ಆದ ಗಾಯಗಳಿಂದ ಆಗಿದೆ ಎಂದು ಕಂಡುಬಂದ ಕಾರಣ ಕಲಂ **281** ಹಾಗೂ **106** ಬಿಎನಎಸ್ ಕಾಯಿದೆಯಂತೆ ಪರಿವರ್ತಿಸಿ ತನಿಖೆ ಕೈಗೊಳ್ಳಲು ಅನುಮತಿಸುವಂತೆ ಮಾನ್ಯ ನ್ಯಾಯಾಲಯಕ್ಕೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ನಂತರ ಅದೇ ದಿನ ಚಾಸಾ-**19** ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿ.**27-6-25** ರಂದು ಚಾಸಾ-**1** ಮತ್ತು ಚಾಸಾ-**4** ರವರ ಮುಂದುವರಿದ ಹೇಳಿಕೆ, ಹಾಗೂ ಚಾಸಾ-**3**, ಮತ್ತು **2** ರವರ ಮರುಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಪ್ರಕರಣದ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-**23** ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ:7 ಫ್ರಾಸಾ-7 (ಶ್ರೀ ರಾಧಾಕೃಷ್ಣ ಕೆ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಾನು 28-05-2024 ರಿಂದ ಪ್ರಸ್ತುತವೂ ಸಹ ಪುತ್ತೂರು ಗ್ರಾಮಾಂತರ ಪೋ ಠಾಣೆಯಲ್ಲಿ ಪೊ. ಮುಖ್ಯ ಪೇದೆ ಎಂದು ಕರ್ತವ್ಯ

ನಿರ್ವಹಿಸುತ್ತಿದ್ದೇನೆ. ದಿ.17-04-2025 ರಂದು ಪುತ್ತೂರು ಗ್ರಾಮಾಂತರ ಪೋ. ಠಾಣೆಯ ಹಗಲು ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸಂ.4.30 ರ ಸಮಯ ಚಾಸಾ21 ರವರು ಚಾಸಾ22 ರವರು ಸ್ವೀಕರಿಸಿಕೊಂಡಿದ್ದ ದೂರನ್ನು ಠಾಣೆಗೆ ಹಾಜರಾಗಿ ನನಗೆ ನೀಡಿದ ನಂತರ ಅದನ್ನು ಸ್ವೀಕರಿಸಿ ನಮ್ಮ ಠಾಣಾ ಯುಡಿಆರ್ ಸಂ.21/2025 ರಂತೆ ನೊಂದಾಯಿಸಿಕೊಂಡು ಪ್ರವವ ವರದಿ ತಯಾರಿಸಿ ಚಾಸಾ18 ರವರ ಮುಖಾಂತರ ಉಪವಿಭಾಗಾಧಿಕಾರಿ ಪುತ್ತೂರು ರವರಿಗೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆಃ ಫ್ರಾಸಾ- 8 (ಶ್ರೀ ರವಿ ಬಿ ಎಸ್) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಾನು ಜೂನ್ 2023 ರಿಂದ ಮಾರ್ಚ್ 2024 ರವರೆಗೆ ಪುತ್ತೂರು ಗ್ರಾಮಾಂತರ ಪೋ ಠಾಣೆಯಲ್ಲಿ ಪ್ರಭಾರ ಪೊ. ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿ.27-06-2025 ರಂದು ಚಾಸಾ27 ರವರಿಂದ ಈ ಪ್ರಕರಣದ ಕಡತವನ್ನು ಸ್ವೀಕರಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ. ದಿ.10.07.2025 ರಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪುತ್ತೂರು ಗ್ರಾಮಾಂತರ ಪೊ.ಠಾಣಾ ಯುಡಿಆರ್ ನಂ. 21-2025 ರ ಮೂಲ ಕಡತವನ್ನು ಎಸ್ ಡಿ ಎಂ ನ್ಯಾಯಾಲಯದಿಂದ ಮಾನ್ಯ ನ್ಯಾಯಾಲಯಕ್ಕೆ ವರ್ಗಾಯಿಸುವಂತೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ಅದೇ ದಿನ ಆರೋಪಿತನ ಮೇಲೆ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆಃ ಫ್ರಾಸಾ-9 (ಶ್ರೀ ಭವಿತ್ ರಾಜ್) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಾನು ಕಳೆದ 1 ವರ್ಷದಿಂದ ಪುತ್ತೂರು ಗ್ರಾಮಾಂತರ ಪೋ

ಠಾಣೆಯಲ್ಲಿ ಪೋ ಮುಖ್ಯ ಪೇದೆ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ.6-4-2025 ರಂದು ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಅದನ್ನು ಠಾಣಾ ಗುನ್ನಾ ಸಂ.40-2025 ರಂತೆ ನೊಂದಾಯಿಸಿಕೊಂಡು ಪ್ರ ವ ವ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಅಸಲು ಪ್ರತಿಯನ್ನು ಹಾಗೂ ಪ್ರತಿಗಳನ್ನು ನಮ್ಮ ಮೇಲಧಿಕಾರಿಗಳಿಗೆ ಸಲ್ಲಿಸಿಕೊಂಡಿರುತ್ತೇನೆ. ದಿ.7-4-25 ರಂದು ಚಾಸಾ-5 ಮತ್ತು 6 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಮಹಜರು ಕ್ರಮ ಜರುಗಿಸಿರುತ್ತೇನೆ. ನಂತರ ಠಾಣಾ ಆವರಣದಲ್ಲಿ ನಿಲ್ಲಿಸಿದಂತಹ ಕೆಎ-21-ಇಇ-2600 ವಾಹನವನ್ನು ಪಂಚರ ಸಮಕ್ಷಮ ಸ್ವಾಧೀನಪಡಿಸಿಕೊಂಡಿದ್ದೇನೆ. ಆರೋಪಿತರಿಗೆ ಐ ಎಮ್ ವಿ ಕಾಯಿದೆ ಕಲಂ 133 ರಡಿಯಲ್ಲಿ ನೋಟೀಸ್ ಜಾರಿಗೊಳಿಸಿರುತ್ತೇನೆ. ನಂತರ ಚಾಸಾ-1 ರಿಂದ 3 ಚಾಸಾ 5 ರಿಂದ 7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಚಾಸಾ-2 ಮತ್ತು 3 ರವರು ನಿಪಿ-7 ಹಾಗೂ 9 ರಂತೆ ನನ್ನ ಸಮಕ್ಷಮ ಹೇಳಿಕೆಗಳನ್ನು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.10 ಫ್ರಾಸಾ-೨ ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಆರೋಪಿ ರಾಕೇಶ್ ನಾಯಕ್ ರವರ ಚಾಲನಾ ಪರವಾನಗಿಯನ್ನು ವಶಕ್ಕೆ ಪಡೆಯುವ ಕುರಿತು ನೋಟೀಸನ್ನು ಜಾರಿಗೊಳಿಸಿದ್ದೇನೆ. ನಂತರ ಚಿಕಿತ್ಸೆ ಪಡೆದ ಅಶ್ವಿನಿಯವರ ಗಾಯದ ಪ್ರ ಪತ್ರವನ್ನು ನೀಡುವ ಬಗ್ಗೆ ವೈದ್ಯಾಧಿಕಾರಿಯವರಿಗೆ ಮನವಿ ಪತ್ರ ನೀಡಿದ್ದೇನೆ. ಅಪಘಾತಪಡಿಸಿದ ವಾಹನದ ಪರಿವೀಕ್ಷಣೆ ನಡೆಸಿ ವರದಿ ನೀಡುವಂತೆ ಆರ್ ಟಿ ಒ ಪುತ್ತೂರುರವರಿಗೆ ಮನವಿ ಪತ್ರ ಸಲ್ಲಿಸಿದ್ದೇನೆ. ಅಪಘಾತ ಸ್ಥಳದಲ್ಲಿ ಮಾಡಿದ ಮಹಜರು ಸಂಬಂಧ ನಡೆಸಿದ ವಿಡಿಯೋ ಚಿತ್ರೀಕರಣ ಸಂಬಂಧಿತ ಡಿವಿಡಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಆರ್ ಟಿ ಒ ರವರಿಂದ ಐ ಎಮ್ ವಿ ವರದಿಯನ್ನು ಸ್ವೀಕರಿಸಿರುತ್ತೇನೆ.

ನಂತರ ಕಡತವನ್ನು ಚಾಸಾ-**23** ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ **?**

ಪ್ರಶ್ನೆ ನಂ.11 **:** ಆರೋಪಿಯಾದ **ನೀವು** ಈ ಪ್ರಕರಣದ ಬಗ್ಗೆ ಏನಾದರೂ ಹೇಳುವುದಿದೆಯಾ**?**

ಉತ್ತರ :

ಪ್ರಶ್ನೆ ನಂ.12 **: ನಿಮ್ಮ** ಪರ ಸಾಕ್ಷಿ ವಿಚಾರಣೆ ಮಾಡು ವಿರಾ **?**

ಉತ್ತರ :

ಮೇಲಿನ ಹೇಳಿಕೆಯನ್ನು ಆರೋಪಿಯ ಹಾಜರಾತಿಯಲ್ಲಿ ಅವನು ನೀಡಿದ ಯಥಾವತ್ತು ಉತ್ತರವನ್ನು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು ಮತ್ತು ಹೇಳಿಕೆಯನ್ನು ಆರೋಪಿಯ ಹೇಳಿಕೆಯ ಸಂಪೂರ್ಣ ಮತ್ತು ಸರಿಯಾದ ಹೇಳಿಕೆಯೆಂದು ನಾನು ದೃಢೀಕರಿಸುತ್ತೇನೆ.

**ದಿನಾಂಕ** ಃ 11/06/2026

1 **ನೇ** ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು